1	2	3	4	5	6
3. ಹಿರೇನಸಬಿ	1	1994-95	3.88	2.79	ಸದರಿ ಕೆಲಸ ಮುಗಿಯುವ ಹಂತದಲ್ಲಿದೆ.
4. ಖಾನಾಪುರ ಎಸ್‌ಕೆ	1	1994-95	4.00	1.68	–ಸದರಿ–
5. ಶಿರಬಡಗಿ	1	1995-96	4.00	3.26	ಸದರಿ ಕೆಲಸಕ್ಕೆ ಟೆಂಡರ್ ಕರೆಯಲಾಗಿದೆ. ಟೆಂಡರ್ ಸ್ವೀಕಾರ ಆದಮೇಲೆ ಕೆಲಸ ಪ್ರಾರಂಭಿಲಾಗುವುದು.
3) ಕಿರುನೀರು ಸರಬರಾಜು ಯೋಜನೆ (ರಾಜ್ಯ) ಸಾಮಾನ್ಯ:					
1. ನವಿಲಹೊಳೆ	1	1994-95	1.30	1.42	ಸಿವಿಲ್ ಕೆಲಸ ಮುಗಿದಿದೆ. ಕೆ.ಇ.ಬಿ. ಕೆಲಸ ಬಾಕಿ ಇದೆ.
2. ಕಳಸ	1	1995-96	1.35	1.05	–ಸದರಿ–
3. ವಡವಟ್ಟಿ	1	1995-96	1.30	1.16	–ಸದರಿ–
4. ಮಹಾಕೂಟ	1	1995-96	1.00	1.10	–ಸದರಿ–
5. ಬೂದಿಹಾಳ್ ಎಸ್‌ಜೆ	1	1995-96	1.27	0.33	–ಸದರಿ–
4) ಕಿರುನೀರು ಸರಬರಾಜು ಯೋಜನೆ (ಕೇಂದ್ರ) ಸಾಮಾನ್ಯ:					
1. ಮುಮರೆಡ್ಡಿಕೊಪ್ಪ	1	1995-96	1.51	1.31	ಪೈಪ್‌ಲೈನ್ ಕೆಲಸ ಹಾಗೂ ಸಿಸ್ಟರ್ನ ಕಟ್ಟೆ ಕಟ್ಟುವ ಕೆಲಸ ಪ್ರಗತಿಯಲ್ಲಿದೆ.
2. ಬೆಳ್ಳಿಕಿಂಡಿ	1	1995-96	1.50	0.38	–ಸದರಿ–
3. ನಂದಿಕೇಶ್ವರ ಆಶ್ರಯ ಕಾಲನಿ	1	1995-96	0.75	0.01	ಸಿವಿಲ್ ಕೆಲಸ ಮುಗಿದಿದೆ. ಕೆ.ಇ.ಬಿ. ಕೆಲಸ ಬಾಕಿ ಇದೆ.
5) ಕಿರುನೀರು ಸರಬರಾಜು ವಿಶೇಷ ಘಟಕ ಯೋಜನೆ (ರಾಜ್ಯ)					
1. ಹಲಕುರ್ಕಿ ಹರಿಜನಕೇರಿ	1	1995-96	1.00	0.66	ಜಲಮೂಲ ಸ್ಥಳ ಅಯ್ಕೆ ಆಗಿದೆ. ಕೊಳವೆಬಾವಿ ಕೊರೆಯಬೇಕಾಗಿದೆ.
2. ಕಗಲಗೊಂಬ	1	1995-96	1.00	0.27	ಮಾದಲು ಕೊರೆದ ಕೊಳವೆಬಾವಿ ಜಲಮೂಲದ ನೀರಿನ ಇಳುವರಿ. ಕಡಿಮೆ ಇದೆ ಇನ್ನೊಂದು ಜಲಮೂಲ ಆಗಬೇಕಾಗಿದೆ.

1	2	3	4	5	6
3. ತಪ್ಪನಕಟ್ಟೆ	1	1995-96	1.00	0.27	ಸ್ಥಳ ಆಯ್ಕೆ ಆಗಿದೆ. ಕೊಳವೆಬಾವಿ ಕೊರೆಯಬೇಕಾಗಿದೆ.
4. ಚೊಳಚಗುಡ್ಡ	1	1995-96	1.00	0.42	ಪೈಪ್‌ಲೈನ್ ಹಾಗೂ ಕಟ್ಟುವ ಕೆಲಸ ಪ್ರಗತಿಯಲ್ಲಿದೆ.
5. ಬೇಡರಬೂದಿಹಾಳ	1	1995-96	1.00	0.53	ಜಲಮೂಲ ಆಗಬೇಕಾಗಿದೆ.
6) ಕಿರುನೀರು ಸರಬರಾಜು ಯೋಜನೆ ವಿಶೇಷ ಘಟಕ ಯೋಜನೆ (ಕೇಂದ್ರ):					
1. ಜಾಲಿಹಾಳ	1	1995-96	1.68	1.33	ಸಿವಿಲ್ ಕೆಲಸ ಮುಗಿದಿದೆ. ಕೆ.ಇ.ಬಿ. ಕೆಲಸ ಬಾಕಿ ಇದೆ.
2. ಜಲಗೇರಿ ತಾಂಡಾ ನಂ.	2-1	1995-96	0.85	0.86	–ಸದರಿ–
7) ಕಿರುನೀರು ಸರಬರಾಜು ಯೋಜನೆ (ರಿವೈವಲ್) ರಾಜ್ಯ:					
1. ಮಾಳಗಿ	1	1995-96	0.95	0.60	ಸಿವಿಲ್ ಕೆಲಸ ಮುಗಿದಿದೆ. ಕೆ.ಇ.ಬಿ. ಕೆಲಸ ಬಾಕಿ ಇದೆ.
2. ಕರ್ಲಕೊಪ್ಪ	1	1995-96	1.50	0.50	ಕೆಲಸ ಪ್ರಗತಿಯಲ್ಲಿದೆ.
3. ಅನಂತಗಿರಿ	1	1995-96	1.50	0.27	ಕೆಲಸ ಮುಗಿದಿದೆ.
8) ನೀರು ಸರಬರಾಜು ಯೋಜನೆ ಆಗುಮೆಂಟೇಶನ್ (ರಾಜ್ಯ):					
1. ಮುಷ್ಟಿಗೇರಿ	1	1995-96	2.00	0.11	ಪೈಪ್‌ಲೈನ್ ಕೆಲಸ ಪ್ರಗತಿಯಲ್ಲಿದೆ.
2. ಯಂಕಂಚಿ:ಮಣಿನಾಗರ ಗುಬ್ಬೇರಕೊಪ್ಪ	1	1995-96	4.00	4.57	ಸಿವಿಲ್ ಕೆಲಸ ಮುಗಿದಿದೆ. ಕೆ.ಇ.ಬಿ. ಕೆಲಸ ಬಾಕಿ ಇದೆ.
9) ಕೊಳವೆನೀರು ಪೂರೈಕೆ ಯೋಜನೆ ಪುನಶ್ಚೇತನ (ರಾಜ್ಯ):					
1. ಚೊಳಚಗುಡ್ಡ	1	1994-95	0.65	0.40	ಪೈಪ್‌ಲೈನ್ ಕೆಲಸದಲ್ಲಿ ತಕರಾರು ಇತ್ತು. ಈಗ ಅದನ್ನು ಪರಿಹರಿಸಲಾಗಿದೆ. ಕಾಮಗಾರಿ ಪ್ರಗತಿಯಲ್ಲಿದೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ:- ಸನ್ಮಾನ್ಯ ಅಧ್ಯಕ್ಷರೆ, ಮಂತ್ರಿಗಳು ತಮ್ಮ ಉತ್ತರದಲ್ಲಿ ವಿವರವನ್ನು ಕೊಟ್ಟಿದ್ದಾರೆ. ಅದರಲ್ಲಿ, ಎನ್.ಆರ್.ಡಬ್ಲ್ಯು.ಎಸ್. ರಾಜ್ಯ ವಲಯದ ಯೋಜನೆಯನ್ನು ಕೊಟ್ಟಿದ್ದಾರೆ, 1994-95ನೇ ಸಾಲಿನಲ್ಲಿ ಕೇಂದ್ರ ವಲಯದ ಯೋಜನೆಗಳಾವುವು ಎನ್ನುವುದನ್ನು ತಾವು ಕೊಟ್ಟಿಲ್ಲ, ಅದರ ಬಗ್ಗೆ ವಿವರಣೆಯನ್ನು ನೀಡಿರಿ. ಕೆಳಗಡೆಯದ್ದಕ್ಕೆ ಎ.ಆರ್.ಡಬ್ಲ್ಯು.ಎಸ್. ಎಂತಿದೆ, ಅದು ಎನ್.ಆರ್.ಡಬ್ಲ್ಯು.ಎಸ್ ಅಲ್ಲ. ಆಮೇಲೆ ಎರಡನೆಯದಾಗಿ ತಮ್ಮ ಮುಖಾಂತರ ಪ್ರಶ್ನೆ ಕೇಳುವುದೇನೆಂದರೆ, ಸುಮಾರು ಈಗ 1994-95ರಲ್ಲಿ ಮಂಜೂರಾಗಿ ಪ್ರಾರಂಭಗೊಂಡಿರತಕ್ಕಂಥ ಸುಮಾರು ಏಳು ಎಂಟು ಯೋಜನೆಗಳು ಇನ್ನು ಜಲಮೂಲದ ಸ್ಥಳ ಪರಿವೀಕ್ಷಣೆಯಲ್ಲೇ ಮುಂದುವರೆದಿವೆ. ಬಹುಶಃ ಕಾರ್ಯಕ್ರಮವನ್ನು ಹಾಕಿಕೊಂಡು ಅದನ್ನು ಮುಗಿಸಲು ಇನ್ನೂ ಎರಡು ವರ್ಷ ಬೇಕಾಗಬಹುದು. ದಯವಿಟ್ಟು ಆ ಯೋಜನೆಗಳ ಬಗ್ಗೆ ಆದಷ್ಟು ಶೀಘ್ರ ಕ್ರಮ ಕೈಗೊಳ್ಳುತ್ತೀರೋ?

ಶ್ರೀ ಎಂ.ಪಿ. ಪ್ರಕಾಶ್:- ಸನ್ಮಾನ್ಯ ಅಧ್ಯಕ್ಷರೇ, ಅನುಬಂಧ 'ಅ' ನಲ್ಲಿ ಕೊಟ್ಟಿರತಕ್ಕಂಥದ್ದರಲ್ಲಿ ಎ.ಆರ್.ಡಬ್ಲ್ಯೂ.ಎಸ್ ರಾಜ್ಯವಲಯದ್ದಿದೆ. ಎ.ಆರ್.ಡಬ್ಲ್ಯು.ಎಸ್ ಕೇಂದ್ರ ವಲಯದ್ದು ಕೊಟ್ಟಿದ್ದೇವೆ. ಹಾಗೆಯೇ ಕಿರುನೀರು ಸರಬರಾಜು ಯೋಜನೆಗೆ ಸಂಬಂಧಿಸಿದಂತೆ ರಾಜ್ಯ ವಲಯದ ವಿಚಾರವನ್ನು ಕೊಟ್ಟಿದ್ದೇವೆ ಹಾಗೂ ಕೇಂದ್ರ ವಲಯದ ವಿವರವನ್ನು ಕೂಡ ಕೊಟ್ಟಿದ್ದೇವೆ; ಇದನ್ನು ಕ್ರಮಾಂಕ ನಾಲ್ಕರಲ್ಲಿ ತಾವು ನೋಡಬಹುದು. ಹಾಗೆಯೇ ಕ್ರಮಾಂಕ ಐದರಲ್ಲಿ ರಾಜ್ಯ ವಲಯದ್ದು ಕೊಟ್ಟಿದ್ದೇವೆ. ಹಾಗೂ ಕ್ರಮಾಂಕ ಆರರಲ್ಲಿ ಕೇಂದ್ರ ವಲಯದ ವಿಚಾರವನ್ನು ಕೊಟ್ಟಿದ್ದೇವೆ. ಈ ರೀತಿಯಾಗಿ ರಾಜ್ಯ ಹಾಗೂ ಕೇಂದ್ರ ವಲಯದಿಂದ ಒಟ್ಟು ಬಾದಾಮಿ ತಾಲ್ಲೂಕಿನಲ್ಲಿ ಇಪ್ಪತ್ತೆಂಟು ಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆಯ ಕಾಮಗಾರಿಗಳು ಪ್ರಗತಿಯಲ್ಲಿವೆ. ಇದರಲ್ಲಿ ಈಗಾಗಲೇ ಏಳು ಗ್ರಾಮಗಳಲ್ಲಿ 1994ರಲ್ಲೇ ಪ್ರಾರಂಭವಾಗಿರುವುದರಿಂದ ಸ್ವಲ್ಪಮಟ್ಟಿಗೆ ವಿಳಂಬವಾಗಿದೆ. ಹತ್ತು ಕೆಲಸಗಳು ಈಗಾಗಲೇ ಮುಗಿದಿವೆ. ಸುಮಾರು 24.57 ಲಕ್ಷ ರೂಪಾಯಿಗಳ ಹೆಚ್ಚುವರಿ ಹಣ ಬಿಡುಗಡೆಯಾದರೆ ಈ ಎಲ್ಲಾ ಕಾಮಗಾರಿಗಳನ್ನು ಸಂಪೂರ್ಣಗೊಳಿಸಬಹುದಾಗಿದೆ. 1996-97 ನೇ ಸಾಲಿನಲ್ಲಿ ಈ ಎಲ್ಲಾ ಕಾಮಗಾರಿಗಳನ್ನು ನಾವು ಮುಗಿಸುತ್ತೇವೆ ಎನ್ನುವ ಮಾತನ್ನು ನಾನು ಈ ಸದನದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ:- ಸನ್ಮಾನ್ಯ ಅಧ್ಯಕ್ಷರೇ, ಇದರಲ್ಲಿ ಕಿರುನೀರು ಸರಬರಾಜು ಐದು ಯೋಜನೆಗಳು ಹಾಗೂ ಇನ್ನು ಏಳು ಕಿರುನೀರು ಸರಬರಾಜು ಯೋಜನೆಗಳು, ಹೀಗೆ ಸುಮಾರು ಹನ್ನೆರಡು ಕಾಮಗಾರಿಗಳಿಗೆ ಒಂದು ವರ್ಷದಿಂದ ಈ ವಿದ್ಯುಚ್ಛಕ್ತಿ ಇರಲಾರದೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇದರ ಬಗ್ಗೆ ತಾವು ಏನು ಕ್ರಮ ಕೈಗೊಂಡಿದ್ದೀರಿ?

ಶ್ರೀ ಎಂ.ಪಿ. ಪ್ರಕಾಶ್:- ಸನ್ಮಾನ್ಯ ಅಧ್ಯಕ್ಷರೇ, ಕುಡಿಯುವ ನೀರಿನ ವಿಚಾರದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯವರು ಆದ್ಯತೆಯ ಮೇಲೆ ಎಲ್ಲಾ ನಿಯಮಗಳನ್ನು ಸಡಿಲಗೊಳಿಸಿ ಅವುಗಳಿಗೆ ವಿದ್ಯುಚ್ಛಕ್ತಿಯನ್ನು ಪೂರೈಸಬೇಕೆನ್ನುವ ಸುತ್ತೋಲೆ ಹಾಗೂ ಆದೇಶ ಕೂಡ ಇದೆ. ಇದರಲ್ಲಿ ಆಗಲೇ

ತಾವು ಹೇಳಿದಂತೆ ಹತ್ತು, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಿಂದ ವಿದ್ಯುತ್ ಸರಬರಾಜಿಲ್ಲದೆ ನಿಂತಿದೆ; ಸಿವಿಲ್ ಕೆಲಸಗಳೆಲ್ಲಾ ಮುಗಿದಿವೆ. ಆದುದರಿಂದ ನಾನು ಈಗಾಗಲೇ ಸಂಬಂಧಪಟ್ಟಂತಹ ಜಿಲ್ಲಾ ಮುಖ್ಯ ಕಾರ್ಯನಿರ್ವಾಹಕರಿಗೆ ಪತ್ರವನ್ನು ಬರೆದು ಆ ಕಾಮಗಾರಿಗಳನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ:- ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳಿದ್ದಾರೆ, ಇದು ರಾಜ್ಯದ ಸಮಸ್ಯೆಯಾಗಿದೆ. ಪ್ರತಿಯೊಂದು ತಾಲ್ಲೂಕಿನಲ್ಲೂ ಕೂಡ ಕನಿಷ್ಟಪಕ್ಷ ಇಪ್ಪತ್ತು ಯೋಜನೆಗಳು, ವಿದ್ಯುಚ್ಛಕ್ತಿಯ ತೊಂದರೆಯಿಂದ ಇದುವರೆವಿಗೂ ಕಾರ್ಯಗತವಾಗದಿರುವಂಥ ಹಲವಾರು ಯೋಜನೆಗಳಿವೆ, ಪ್ರತಿಯೊಂದು ತಾಲ್ಲೂಕಿನಲ್ಲೂ ಹತ್ತು, ಇಪ್ಪತ್ತು ಯೋಜನೆಗಳಿವೆ. ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಈ ಕುಡಿಯುವ ನೀರಿನ ಯೋಜನೆಯ ಸಲುವಾಗಿ ಆದ್ಯತೆಯನ್ನು ನೀಡುತ್ತಾರೆಯೇ? ಅಧಿಕಾರಿಗಳಂತೂ, ಉದ್ದೇಶಪೂರ್ವಕವಾಗಿ ನಿರ್ಲಕ್ಷ ಮಾಡುತ್ತಾರೆ. ಇದರಿಂದ ಅವರಿಗೆ ಯಾವ ಪ್ರತಿಫಲ ಸಿಗುವುದಿಲ್ಲ, ಅವರಿಗೆ ಯಾರೂ ಕೂಡ ಹಣವನ್ನು ಕೊಡುವುದಿಲ್ಲ. ಇದರ ಜೊತೆಗೆ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಇನ್ನೊಂದನ್ನು ವಿನಂತಿ ಮಾಡಿಕೊಳ್ಳುತ್ತೇನೆ, ಈಗ ಹೆಚ್ಚುವರಿ ಬಡಾವಣೆಗಳಾಗಿರುವಂಥದ್ದಕ್ಕೆ ನಾವು ವಿದ್ಯುಚ್ಛಕ್ತಿಯನ್ನು ಕೊಡುತ್ತಿಲ್ಲ. ಪ್ರತಿಯೊಂದು ತಾಲ್ಲೂಕಿನಲ್ಲೂ ಕೂಡ ಕನಿಷ್ಟ ಸುಮಾರು ನಲವತ್ತು, ಐವತ್ತು ಹೊಸ ಬಡಾವಣೆಗಳು, ಈಗ ಜನತಾ ಮನೆಗಳನ್ನು ಕಟ್ಟಿರತಕ್ಕಂಥವು, ಮತ್ತು ಗ್ರಾಮಗಳು ಹೆಚ್ಚು ಬೆಳೆದಿರುವಂಥದ್ದಕ್ಕೆ ಇದುವರೆವಿಗೂ ನಾವು ವಿದ್ಯುಚ್ಛಕ್ತಿಯನ್ನು ಇದುವರೆಗೂ ಕೊಡುವುದಕ್ಕಾಗಿಲ್ಲ. ದಯವಿಟ್ಟು ಅದರ ಬಗ್ಗೆಯೂ ತಾವು ಗಮನ ಹರಿಸಿದರೆ ಬಹಳ ಒಳ್ಳೆಯದು.

ಶ್ರೀ ಎಂ.ಪಿ. ಪ್ರಕಾಶ್:- ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಇಲಾಖೆಯ ವತಿಯಿಂದ ಈಗ ವಿದ್ಯುಚ್ಛಕ್ತಿಯನ್ನು ಇಂತಹ ನೀರು ಸರಬರಾಜು ಯೋಜನೆಗಳಿಗೆ ಆದ್ಯತೆಯ ಮೇಲೆ ಕೊಡಬೇಕೆನ್ನುವಂಥ ಸುತ್ತೋಲೆಯನ್ನು ಹೊರಡಿಸಿದ್ದಾರೆ ಹಾಗೂ ಆದೇಶವನ್ನೂ ಕೂಡ ಕಳುಹಿಸಿಕೊಟ್ಟಿದ್ದಾರೆ. ಕೆಲವು ಕಡೆ ವಿಳಂಬವಾಗಿದೆ, ಅದಕ್ಕೆ ನಾನಾ ಕಾರಣಗಳಿರಬಹುದು, ಆದರೂ ನಿಯಮಾವಳಿಗಳನ್ನೆಲ್ಲಾ ಬದಿಗೊತ್ತಿ ಇವುಗಳಿಗೆ ಆದ್ಯತೆಯನ್ನು ಕೊಡಬೇಕೆನ್ನುವುದರ ಬಗ್ಗೆ ಈ ಸರ್ಕಾರ ತೀರ್ಮಾನವನ್ನು ತೆಗೆದುಕೊಂಡಿದೆ. ಎರಡನೆಯದು, ಜನತಾ ಕಾಲೋನಿ ಮೊದಲಾದಂಥ ಕಡೆಗಳಿಗೆ ನಾವು ವಿದ್ಯುಚ್ಛಕ್ತಿಯನ್ನು ಕೊಡಬೇಕಾದಾಗ, ಗ್ರಾಮ ಪಂಚಾಯಿತಿಗಳು ಕಟ್ಟಬೇಕಾಗಿರುವ ಹಣವನ್ನು ಕಟ್ಟಬೇಕಾಗುತ್ತದೆ. ಅದನ್ನು ಅನೇಕ ಗ್ರಾಮ ಪಂಚಾಯಿತಿಗಳು ಕಟ್ಟದೇ ಇರುವುದರಿಂದ ಸ್ವಲ್ಪಮಟ್ಟಿಗೆ ತೊಂದರೆಯಾಗಿದೆ. ಅದಕ್ಕೆ ನಾವು ಕೆಲವು ವಾಸ್ತವವಾದಂಥ ವಿಚಾರಗಳನ್ನೂ ಕೂಡ ತಿಳಿಸಿದ್ದೇವೆ. ಕನಿಷ್ಟಪಕ್ಷ ಅಂತಹ ಪ್ರದೇಶಗಳಲ್ಲಿ ಒಬ್ಬ ವ್ಯಕ್ತಿ ತನಗೆ ವಿದ್ಯುಚ್ಛಕ್ತಿ ಬೇಕೆನ್ನುವ ಅರ್ಜಿಯನ್ನು ಕೊಟ್ಟರೆ, ಅದಾದನಂತರ ಉಳಿದ ಕಂಬಗಳನ್ನು ಹಾಕತಕ್ಕಂಥದ್ದು ಕೂಡ ಸುಲಭವಾಗುತ್ತದೆ. ಆ ತರಹದಲ್ಲಿಯೂ ಕೂಡ ಕ್ರಮ ಕೈಗೊಳ್ಳಬೇಕೆಂದು ನಮ್ಮ ಜಿಲ್ಲಾ ಪರಿವೀಕ್ಷಣೆಯ ಸಂದರ್ಭಗಳಲ್ಲಿ ಅವರಿಗೆ

ನಾವು ಈ ವಿಚಾರವನ್ನು ತಿಳಿಸಿದ್ದೇವೆ. ಆದರೂ ಈ ಬಗ್ಗೆ, ಹೊಸ ಕಾಲೋನಿಗಳಿಗೆ ವಿದ್ಯುಚ್ಛಕ್ತಿ ಕೊಡುವ ಬಗ್ಗೆ ಗ್ರಾಮಪಂಚಾಯಿತಿಯವರು ಬಾಕಿಯನ್ನು ಕಟ್ಟಿದ ತಕ್ಷಣವೇ ವಿದ್ಯುಚ್ಛಕ್ತಿ ಮಂಡಳಿಯವರು ಕ್ರಮ ತೆಗೆದುಕೊಳ್ಳುತ್ತಾರೆ.

ವಿಷಯ:- ಲಿಂಗಸಗೂರು ತಾಲ್ಲೂಕು ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವುದು.

344 (2199) **ಶ್ರೀ ಆಮರೇಗೌಡ ಲಿಂಗನಗೌಡ ಪಾಟೀಲ್ (ಲಿಂಗಸಗೂರು):-** ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಯಚೂರು ಜಿಲ್ಲೆ ಲಿಂಗಸಗೂರು ತಾಲ್ಲೂಕಿನಲ್ಲಿ 50 ಹಾಸಿಗೆವುಳ್ಳ ಆಸ್ಪತ್ರೆಯನ್ನು ಜರ್ಮನ್ ಸರ್ಕಾರದ ನೆರವಿನಿಂದ ನೂರು ಹಾಸಿಗೆವುಳ್ಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸುವ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು?

ಡಾ।। ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ಬಂದಿದೆ.

ಆ) ಜರ್ಮನ್ ಯೋಜನೆಯಲ್ಲಿ ಲಿಂಗಸಗೂರು ಆಸ್ಪತ್ರೆಯನ್ನು 50 ಹಾಸಿಗೆಗಳಿಂದ 100 ಹಾಸಿಗೆಗಳಿಗೆ ಹೆಚ್ಚಿಸಲಾಗುವುದು.

ಶ್ರೀ ಆಮರೇಗೌಡ ಲಿಂಗನಗೌಡ ಪಾಟೀಲ್:- ಸನ್ಮಾನ್ಯ ಅಧ್ಯಕ್ಷರೇ, ಉತ್ತರವನ್ನು ಒದಗಿಸಿದ್ದಾರೆ. ಜರ್ಮನ್ ಯೋಜನೆಯಲ್ಲಿ ಲಿಂಗಸಗೂರು ಆಸ್ಪತ್ರೆಯನ್ನು 50 ಹಾಸಿಗೆಗಳಿಂದ 100 ಹಾಸಿಗೆಗೆ ಹೆಚ್ಚಿಸಲಾಗುವುದೆಂದು ಹೇಳಿದ್ದಾರೆ. ಈಗಾಗಲೇ ಈ ಸರ್ಕಾರ ಮಂಜೂರು ಮಾಡಿದೆಯೇ ಅಥವಾ ಯಾವ ವರ್ಷದಲ್ಲಿ ಮಂಜೂರಾಗಿದೆ ಎನ್ನುವುದರ ಬಗ್ಗೆ ಮಂತ್ರಿಗಳು ಸ್ವಲ್ಪ ತಿಳಿಸಬೇಕು.

ಡಾ।। ಹೆಚ್.ಸಿ. ಮಹದೇವಪ್ಪ:- ಸನ್ಮಾನ್ಯ ಸಭಾಧ್ಯಕ್ಷರೇ, ಈಗಾಗಲೇ ಜರ್ಮನ್ ಸಹಾಯದೊಡನೆ ಅದನ್ನು ಮೇಲ್ದರ್ಜೆಗೆ ಏರಿಸಲು ಕ್ರಮ ಕೈಗೊಂಡಿದ್ದೇವೆ. ಆ ಒಂದು ಯೋಜನೆ ರಾಜ್ಯಕ್ಕೆ ಮಂಜೂರಾಗಿರುವುದರಿಂದ ಯಾವ ವರ್ಷ ಮಾಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಅದನ್ನು ಮೇಲ್ದರ್ಜೆಗೆ ಏರಿಸುವುದಕ್ಕೆ ಈಗಾಗಲೇ ಕ್ರಮವನ್ನು ಕೈಗೊಂಡಿದ್ದೇವೆ ಹಾಗೂ ಕಟ್ಟಡ ದುರಸ್ತಿಗೂ ಕೂಡ ಕ್ರಮವನ್ನು ಕೈಗೊಂಡಿದ್ದೇವೆ ಎನ್ನುವುದನ್ನು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಆಮರೇಗೌಡ ಲಿಂಗನಗೌಡ ಪಾಟೀಲ್:- ಮೇಲ್ದರ್ಜೆಗೆ ಏರಿಸತಕ್ಕಂಥ ಅವಶ್ಯಕತೆ ಇಲ್ಲ, ಈಗ ಅಲ್ಲ 50 ಹಾಸಿಗೆಯಿಂದ 100 ಹಾಸಿಗೆಗಳಿಗೆ ಏರಿಸಿದರೆ ಅಲ್ಲಿ ಕಟ್ಟಡ ಕಟ್ಟುವುದಕ್ಕೆ ಇವರಿಗೆ ಜಾಗವಿಲ್ಲ. ಆದುದರಿಂದ ಅದನ್ನು ಸ್ಥಳಾಂತರಿಸಿ ಬೇರೆ ಕಡೆ ಕಟ್ಟುವುದಕ್ಕೆ ಸರ್ಕಾರ ಯೋಚಿಸಿದೆಯೇ ಎನ್ನುವುದರ ಬಗ್ಗೆ ಮತ್ತು ಇದನ್ನು 100 ಹಾಸಿಗೆಗಳಿಗೆ ಏರಿಸಿದ ನಂತರ ಕಟ್ಟಡ ಕಟ್ಟುವ ಕೆಲಸ ಯಾವಾಗ ಪ್ರಾರಂಭಿಸಲಾಗುವುದು ಎನ್ನುವುದರ ಬಗ್ಗೆಯೂ ಕೂಡ ಸ್ವಲ್ಪ ಮಾಹಿತಿಯನ್ನು ಒದಗಿಸಬೇಕು.

ಡಾ।। ಹೆಚ್.ಸಿ. ಮಹದೇವಪ್ಪ:- ಮಾನ್ಯ ಅಧ್ಯಕ್ಷರೇ, ವಿವರವಾದಂಥ ಮಾಹಿತಿಯನ್ನು ತರಿಸಿಕೊಂಡು, ಅಲ್ಲೇ ಇರಬೇಕೇ ಅಥವಾ ಬೇರೆ ಕಡೆಗೆ ಸ್ಥಳಾಂತರಿಸಬೇಕೇ ಎನ್ನುವುದನ್ನು ಪರಿಶೀಲನೆ ಮಾಡಿ ಕ್ರಮಕೈಗೊಳ್ಳುತ್ತೇನೆ.

ಅಧ್ಯಕ್ಷರು:- ಮಲ್ಲಿಕಾರ್ಜುನ ಖರ್ಗೆಯವರೇ, ತಮ್ಮ 2201 ಪ್ರಶ್ನೆಗೆ ಸರ್ಕಾರದವರು ಸ್ವಲ್ಪ ಸಮಯವನ್ನು ಕೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇದಕ್ಕೆ ಸಮಯದ ಅವಶ್ಯಕತೆ ಇಲ್ಲ; ಏಕೆಂದರೆ, ಇದು ಬಹಳ ಸರಳವಾದಂಥ ಪ್ರಶ್ನೆ. ಯಾದಗಿರಿ ಮತ್ತು ಗುಲ್ಬರ್ಗಾ ಜಿಲ್ಲಾ ಪರಿಷತ್‌ನ ಇಂಜನಿಯರಿಂಗ್ ವಿಭಾಗಗಳು ಅನವಶ್ಯಕ ವಸ್ತುಗಳನ್ನು ಖರೀದಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಆಮೇಲೆ, ಹಾಗಿದ್ದಲ್ಲಿ, ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು ಎನ್ನುವುದೊಂದನ್ನೇ ನಾನು ಕೇಳಿದ್ದೇನೆ. ಇದಕ್ಕಿಂತ ಮುಂಚೆಯೇ ಸುಮಾರು ಒಂದು ತಿಂಗಳು ಇರಬಹುದು ಅಥವಾ ಇಪ್ಪತ್ತು ದಿವಸಗಳಿರಬಹುದು ನಾನು ಒಂದು ಪತ್ರವನ್ನೂ ಕೂಡ ಸಂಬಂಧಪಟ್ಟಂಥ ನಮ್ಮ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಿಗೆ ಬರೆದಿದ್ದೇನೆ. ಅದು ಏನೆಂದರೆ, ಇಂತಹ ಕಡೆ ಬಹಳಷ್ಟು ಅವ್ಯವಹಾರ ನಡೆದಿದೆ, ತಾವು ಇದನ್ನು ತನಿಖೆ ಮಾಡಿ ತಾವು ಲೋಕಾಯುಕ್ತಕ್ಕೆ ಒಪ್ಪಿಸಿ ಎನ್ನುವುದನ್ನು ಕೂಡ ಹೇಳಿದ್ದೇನೆ. ಇದಕ್ಕೆ ಸಾಕಷ್ಟು ಸಮಯ ಸಿಕ್ಕಿದೆ, ಏತಕ್ಕೆ ಸಮಯ ತೆಗೆದುಕೊಳ್ಳುತ್ತಾರೋ ನನಗೆ ಗೊತ್ತಿಲ್ಲ.

ಶ್ರೀ ಎಂ.ಪಿ. ಪ್ರಕಾಶ್:- ಸನ್ಮಾನ್ಯ ಅಧ್ಯಕ್ಷರೇ, ಅವರ ಪತ್ರದ ಮೇಲೆ ನಾನು ಈಗಾಗಲೇ ಕ್ರಮವನ್ನು ತೆಗೆದುಕೊಂಡಿದ್ದೇನೆ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅದರ ಬಗ್ಗೆ ವಿಚಾರಣೆ ಮಾಡಿ ವರದಿಯನ್ನು ಕಳುಹಿಸಿಕೊಡುತ್ತಿದ್ದಾರೆ. ಈ ಸಂದರ್ಭದಲ್ಲಿ ಅವರು ಕಳುಹಿಸಿಕೊಟ್ಟಿರುವ ವರದಿ ಅಸಮರ್ಪಕವಾಗಿದೆ ಆದುದರಿಂದ ಒಂದು ಮೂರ್ನಾಲ್ಕು ದಿವಸಗಳ ಸಮಯ ಸಿಕ್ಕರೆ ವಿವರವಾಗಿರತಕ್ಕಂಥ ಉತ್ತರವನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ.

ವಿಷಯ:- ಪದವಿಪೂರ್ವ ಕಾಲೇಜುಗಳಲ್ಲಿ ವೃತ್ತಿಪರ ಶಿಕ್ಷಣ ಪಡೆದವರ ನೇಮಕ.

335 (2242) **ಡಾ।। ಎಂ.ಪಿ. ಕರ್ಕಿ (ಕುಮಟಾ):-** ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪಿ.ಯು.ಸಿ.ಯಲ್ಲಿ ವೃತ್ತಿಪರ ಶಿಕ್ಷಣ ಪಡೆದ ಶಿಕ್ಷಕರನ್ನು ಶಿಕ್ಷಕರ ಹುದ್ದೆಗೆ ನೇಮಿಸಲು ಸರ್ಕಾರ ಕ್ರಮಕೈಗೊಳ್ಳಲಿದೆಯೇ?

ಆ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-

ಅ) ಇಲ್ಲ,

ಆ) ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ ನಿಯಮಗಳಲ್ಲಿ ಪ್ರಾಥಮಿಕ ಶಾಲಾ ಸಹಾಯಕ ಶಿಕ್ಷಕರ ಹುದ್ದೆಗೆ ಎಸ್.ಎಸ್.ಎಲ್.ಸಿ. ಮತ್ತು ಟಿ.ಸಿ.ಹೆಚ್. ಅಥವಾ ಪಿ.ಯು.ಸಿ.ಯಲ್ಲಿ ಶಿಕ್ಷಣಶಾಸ್ತ್ರ -1 ಮತ್ತು 2 ವ್ಯಾಸಂಗ ಮಾಡಿ ಜೊತೆಗೆ ಇಂಟ್ರನ್‌ಶಿಪ್ ತರಬೇತಿ ಹೊಂದಿದ ವಿದ್ಯಾರ್ಹತೆಯನ್ನು ನಿಗದಿಪಡಿಸಿದೆ. ವೃತ್ತಿಪರ ಶಿಕ್ಷಣ ಹೊಂದಿರುವ ಅಭ್ಯರ್ಥಿಗಳು ಶಿಕ್ಷಕರ ಹುದ್ದೆಗಳಿಗೆ ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿಲ್ಲದ ಕಾರಣ ಇವರು ಶಿಕ್ಷಕರ ಹುದ್ದೆಯ ನೇಮಕಾತಿಗೆ ಅರ್ಹರಾಗಿರುವುದಿಲ್ಲ.

ಡಾ॥ ಎಂ.ಪಿ. ಕರ್ಕಿ:- ಅವರು ಉತ್ತರವನ್ನು ಒದಗಿಸಿದ್ದೇನೆಂದು ಹೇಳಿದ್ದಾರೆ, ಅಲ್ಲಿಯವರೆಗೆ ಬಂದಿದೆ, ನಾನು ಉಪಪ್ರಶ್ನೆಯನ್ನು ಕೇಳುವುದು ಮಾತ್ರ ಬಾಕಿ ಉಳಿದಿದೆ. ಶಿಕ್ಷಕ, ಶಿಕ್ಷಣವನ್ನು ಹೊಂದಿರತಕ್ಕಂಥ ಅಭ್ಯರ್ಥಿಗಳು, ಶಿಕ್ಷಕರ ಹುದ್ದೆಗಳಿಗೆ ನಿಗದಿಪಡಿಸಿದ ವಿದ್ಯಾರ್ಹತೆಯನ್ನು ಹೊಂದಿಲ್ಲದ ಕಾರಣ, ಇವರು ಶಿಕ್ಷಕರ ಹುದ್ದೆ ನೇಮಕಾತಿಗೆ ಅರ್ಹರಾಗಿರುವುದಿಲ್ಲವೆಂದು ಬರೆದಿದ್ದಾರೆ. ಕನ್ನಡ ಕಲಿಸುವುದಕ್ಕೆ ಕನ್ನಡ ಅಭ್ಯಾಸ ಮಾಡಿದಂತಹವರು ಇರಬೇಕು, ವಿಜ್ಞಾನ ಕಲಿಸುವುದಕ್ಕೆ ವಿಜ್ಞಾನದ ಅರ್ಹತೆ ಇರಬೇಕು ಹಾಗೆ ಸೋಷಿಯಲ್ ಸ್ಟಡೀಸ್ ಕಲಿಸುವುದಕ್ಕೆ ಸೋಷಿಯಲ್ ಸ್ಟಡೀಸ್ ಅರ್ಹತೆ ಇರಬೇಕು; ಹಾಗೆಯೇ ಕ್ರಾಫ್ಟ್ ಮತ್ತು ಡ್ರಾಯಿಂಗ್ ವಿಷಯಗಳನ್ನು ಕಲಿಸಬೇಕಾದ ಶಿಕ್ಷಕರ ಸ್ಥಾನಕ್ಕೆ ಆಯ್ಕೆ ಮಾಡಿಕೊಳ್ಳಲು ಅಭ್ಯರ್ಥಿಗಳ ಅರ್ಹತೆ ಏನು? ವಿದ್ಯಾರ್ಹತೆ ಏನು? ಅಲ್ಲಿ ಯಾರನ್ನು ಈ ವಿಷಯಕ್ಕೆ ಶಿಕ್ಷಕರನ್ನಾಗಿ ನೇಮಿಸುತ್ತೀರಿ ಅಥವಾ ಶಿಕ್ಷಣದಲ್ಲಿ ಈ ವಿಷಯಗಳು ಮಹತ್ವದಲ್ಲ ಎಂದು ಸರ್ಕಾರ ಪರಿಗಣಿಸಿದೆಯೇ?

ಶ್ರೀ ಹೆಚ್.ಜಿ. ಗೋವಿಂದೇಗೌಡ:- ಮಾನ್ಯ ಅಧ್ಯಕ್ಷರೇ, ಸ್ನೇಹಿತರು ಪಿ.ಯು.ಸಿ.ಯಲ್ಲಿ ವೃತ್ತಿಪರ ಶಿಕ್ಷಣ ಪಡೆದ ಶಿಕ್ಷಕರನ್ನು ಶಿಕ್ಷಕರ ಹುದ್ದೆಗೆ ನೇಮಿಸಲು ಸರ್ಕಾರದವರು ಕ್ರಮಕೈಗೊಳ್ಳುವರೇ ಎಂದು ಕೇಳಿದ್ದಾರೆ, ಅದಕ್ಕೆ ಇಲ್ಲವೆಂದು ಉತ್ತರವನ್ನು ಕೊಟ್ಟಿದ್ದೇವೆ. ಹಾಗಿಲ್ಲದಿದ್ದಲ್ಲಿ ಇದಕ್ಕೆ ಕಾರಣಗಳೇನು ಎಂದು ಕೇಳಿದ್ದಾರೆ. ಕಾರಣಗಳೇನು ಎಂದರೆ, ವೃತ್ತಿಪರ ಶಿಕ್ಷಣವನ್ನು ಕೊಡುತ್ತಿರುವುದು ಅವರು ಸ್ವತಂತ್ರವಾಗಿ ಜೀವನ ಮಾಡಲಿ ಎನ್ನುವ ಒಂದೇ ಒಂದು ಘನ ಉದ್ದೇಶದಿಂದ. ಜಾಬ್ ಓರಿಯಂಟೆಡ್ ಕೋರ್ಸ್ ಸಾಮಾನ್ಯವಾಗಿ ಎಲೆಕ್ಟ್ರಿಕ್, ಸರ್ವೇ ಕೆಲಸ, ಹಲವಾರು ರೀತಿಗಳಲ್ಲಿ ನಲವತ್ತೆರಡು ಹುದ್ದೆಗಳಿರತಕ್ಕಂಥದ್ದು. ಅವರು ಸ್ವತಂತ್ರವಾಗಿ ತಮ್ಮ ತಮ್ಮ ಉದ್ಯೋಗವನ್ನು ಇಂಡಿಪೆಂಡೆಂಟ್ ಆಗಿ ಮಾಡಲೆನ್ನುವ ಉದ್ದೇಶದಿಂದ ಜೆ.ಓ.ಸಿ. ಇಂಟ್ರಡ್ಯೂಸ್ ಮಾಡಿರತಕ್ಕಂಥದ್ದು. ಆಮೇಲೆ ಈಗ ಅದನ್ನು ನಾವು ನಿಲ್ಲಿಸಿರತಕ್ಕಂಥ ಉದ್ದೇಶ ಏನೆಂದು ಸ್ನೇಹಿತರು ಕೇಳಿರುತ್ತಾರೆ. ನಿಲ್ಲಿಸಿರತಕ್ಕಂಥಾದ್ದು ಏಕೆಂದರೆ ಟಿ.ಸಿ.ಹೆಚ್. ಪರೀಕ್ಷೆಗೆ ಕೂರಬೇಕಾದರೆ, ಉಪಾಧ್ಯಾಯನಾಗಬೇಕಾದರೆ ಕೆಲವು ವಿಷಯಗಳನ್ನು ಅವನು ತಿಳಿದುಕೊಂಡಿರಬೇಕಾಗುತ್ತದೆ. ವೃತ್ತಿಪರ ಶಿಕ್ಷಣದಲ್ಲಿ ಇದು ಯಾವುದಕ್ಕೂ ಅವಕಾಶವಿಲ್ಲ. ವೃತ್ತಿಪರ ಶಿಕ್ಷಣದಲ್ಲಿ, ಉಪಾಧ್ಯಾಯನಾಗಬೇಕಾದರೆ ಅವನಿಗೆ ಫಿಸಿಕ್ಸ್ ಬಗ್ಗೆ ಗಂಧ ಇರಬೇಕಾಗುತ್ತದೆ, ಕೋರ್ ಸಬ್ಜೆಕ್ಟ್ ಬಗ್ಗೆ ಸ್ವಲ್ಪ ವಿಷಯ ತಿಳಿದುಕೊಳ್ಳಬೇಕಾಗಿರುತ್ತದೆ. ಕೆಮಿಸ್ಟ್ರಿ ಹೀಗೆ ಹಲವಾರು ವಿಷಯಗಳ ಬಗ್ಗೆ ಅಲ್ಲಿ ಅವಶ್ಯಕತೆ ಇರುವುದರಿಂದ ಇದ್ಯಾವುದೂ ಜಾಬ್

ಓರಿಯೆಂಟೆಡ್ ಕೋರ್ಸಿನಲ್ಲಿ ಇಲ್ಲದೇ ಇರುವುದರಿಂದ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.-ಯಲ್ಲಿ ಉತ್ತೀರ್ಣರಾಗಿರತಕ್ಕಂಥ ವಿದ್ಯಾರ್ಥಿಗಳಿಗೆ ಅಲ್ಲಿ ಅವಕಾಶ ಮಾಡಿಕೊಡತಕ್ಕಂಥಾದ್ದು ಒಳ್ಳೆಯದು. ಇವರೆಲ್ಲಾ ಇಂಡಿಪೆಂಡೆಂಟ್ ಆಗಿ ಜೀವನ ಮಾಡುವುದಕ್ಕೆ ಬಹಳ ಅನುಕೂಲವಾಗುತ್ತದೆ ಜಾಬ್ ಓರಿಯೆಂಟೆಂಡ್ ಕೋರ್ಸಿನಲ್ಲಿ ಎನ್ನತಕ್ಕಂಥ ಉದ್ದೇಶದಿಂದ ಅದನ್ನು ನಿಲ್ಲಿಸಿರತಕ್ಕಂಥಾದ್ದು.

ಡಾ।। ಎಂ.ಪಿ. ಕರ್ಕಿ:- ಈಗ ಶಾಲೆಗಳಲ್ಲಿ ಡ್ರಾಯಿಂಗ್ ಕಲಿಸುತ್ತಾರೆ, ಕ್ರಾಫ್ಟ್ ಕಲಿಸುತ್ತಾರೆ. ಆವುಗಳನ್ನು ಕಲಿಸಲು ಜಾಬ್ ಓರಿಯೆಂಟೆಂಡ್ ಕೋರ್ಸಿನಲ್ಲಿ ಆ ವೃತ್ತಿಯನ್ನು ಅಭ್ಯಾಸ ಮಾಡಿರತಕ್ಕಂಥವರನ್ನು ತೆಗೆದುಕೊಳ್ಳವುದು ಸರಿಯಲ್ಲವೆ? ವಿದ್ಯಾರ್ಹತೆ ಬಗ್ಗೆ ತಾವೇ ಮಾಡಿರತಕ್ಕ ಕಾನೂನು; ತಾವೇ ಮಾಡಿರತಕ್ಕ ನಿಯಮಗಳಿಗೆ ಇದರಲ್ಲಿ ಒಂದು ನಿಯಮ ಸೇರಿಸಿಕೊಳ್ಳಲು ಏನು ತೊಂದರೆ ಇದೆ? ಡ್ರಾಯಿಂಗ್, ಕ್ರಾಫ್ಟ್ ಇವುಗಳನ್ನು ಕಲಿಸಲು ಎಲ್ಲರಿಗೂ ಬರುವುದಿಲ್ಲ. ವಿಜ್ಞಾನ ಕಲಿಸುವವರು ಡ್ರಾಯಿಂಗ್ ಕಲಿಸಲು ಬರುವುದಿಲ್ಲ. ಡ್ರಾಯಿಂಗ್ ಕಲಿಸಲು ಡ್ರಾಯಿಂಗ್ ಕಲಿತವರೇ ಬೇಕಾಗಿರುತ್ತದೆ. ಹಾಗಾಗಿ ಡ್ರಾಯಿಂಗ್ ಒಂದು ವಿಷಯವಾಗಿರಬೇಕಾದರೆ ಆ ಒಂದು ವಿದ್ಯಾರ್ಹತೆಯನ್ನು ತಮ್ಮ ನಿಯಮದ ಪ್ರಕಾರ ತಿದ್ದುಪಡಿ ಮಾಡಿಕೊಂಡರೆ ಸಾಧ್ಯವಾಗುವುದಿಲ್ಲವೇ ಎನ್ನತಕ್ಕಂಥ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಈಗ ಡ್ರಾಯಿಂಗ್ ಯಾರು ಕಲಿಸುತ್ತಾರೆ?

ಶ್ರೀ ಹೆಚ್.ಜಿ. ಗೋವಿಂದೇಗೌಡ:- ಮಾನ್ಯ ಅಧ್ಯಕ್ಷರೇ, ನಾನು ಆಗಲೇ ಹೇಳಿದೆ, ಜಾಬ್ ಓರಿಯೆಂಟೆಡ್ ಕೋರ್ಸ್ ಎಂದರೆ ಅವರಿಗೆ ಸಾಮಾನ್ಯವಾಗಿ ನಾವು ಏನು ಟ್ರೈನಿಂಗ್ ಕೊಡುತ್ತೇವೆ, ಅದು ಆದಮೇಲೆ ಅವರ ಕಾಲಮೇಲೆ ಅವರು ನಿಂತುಕೊಂಡು ಜೀವನ ಮಾಡಿಕೊಳ್ಳಬಹುದಾಗಿದೆ. ಎಲೆಕ್ಟ್ರೀಷಿಯನ್ ಹೀಗೆ ಹಲವಾರು ಜಾಬ್ ಓರಿಯೆಂಟೆಡ್ ಕೋರ್ಸ್ ಇರುವುದರಿಂದ ಅವರು ಇಂಡಿಪೆಂಡೆಟ್ ಆಗಿ ಕೆಲಸ ಮಾಡಲಿ ಎನ್ನುವ ಒಂದೇ ಒಂದು ಉದ್ದೇಶದಿಂದ ಜಾಬ್ ಓರಿಯೆಂಟೆಡ್ ಕೋರ್ಸ್ ಪ್ರಾರಂಭವಾಗಿರತಕ್ಕಂಥಾದ್ದು. ಅವರನ್ನು ನಾವು ಟಿ.ಸಿ.ಹೆಚ್. ತರಗತಿಗೆ ಸೇರಿಸಿದರೆ ಅವರಿಗೆ ಪ್ರಾಕ್ಟಿಕಲ್ ಆಗಿ ಸಬ್ಜೆಕ್ಟ್ ಗೊತ್ತಿರುವುದಿಲ್ಲ. ನಾನು ತಮಗೆ ಮೊದಲೇ ಹೇಳಿರುವಂತೆ ಈ ಎಲ್ಲಾ ಸಬ್ಜೆಕ್ಟ್‌ಗಳ ಅರಿವು ಇಲ್ಲದೇ ಇರತಕ್ಕಂಥವರನ್ನು ನಾವು ಟಿ.ಸಿ.ಹೆಚ್.ಗೆ ಕೊಟ್ಟರೆ, ಇವತ್ತು ಪ್ರೈಮರಿ ಸ್ಕೂಲ್ ಟೀಚರ್‌ಗಳ ಗುಣಮಟ್ಟ ಜಾಸ್ತಿಯಾಗಬೇಕು, ಪಾಠ ಚೆನ್ನಾಗಿ ಹೇಳಬೇಕು ಎನ್ನುವ ಒಂದು ಭಾವನೆಗೆ ತದ್ವಿರುದ್ಧವಾಗಿರುವುದರಿಂದ ಈ ಜಾಬ್ ಓರಿಯೆಂಟೆಡ್ ಕೋರ್ಸ್‌ನವರಿಗೆ ಅಲ್ಲಿ ಅವಕಾಶ ಕೊಡದೇ ಇರತಕ್ಕಂಥಾದ್ದು. ಬೇರೆ ಯಾವುದೇ ದೃಷ್ಟಿಯಿಂದ ಅಲ್ಲ.

ಡಾ।। ಎಂ.ಪಿ. ಕರ್ಕಿ:- ಡ್ರಾಯಿಂಗ್, ಕ್ರಾಫ್ಟ್ ಎನ್ನುವುದು ಒಂದು ವಿಶೇಷವಾದ ವಿಷಯ. ಅದನ್ನು ಬೇರೆ ಯಾರೂ ಕಲಿಸಲು ಬರುವುದಿಲ್ಲ. ಸೈನ್ಸ್ ಕಲಿತವರು ಅದನ್ನು ಕಲಿಸಲು ಬರುವುದಿಲ್ಲ. ಈಗ ಡ್ರಾಯಿಂಗ್ ವಿಷಯ ಇದೆ, ಕ್ರಾಫ್ಟ್ ವಿಷಯ ಇದೆ. ಅದನ್ನು ಯಾರ ಮುಖಾಂತರ ಕಲಿಸುತ್ತೀರಿ ತಾವು?

ಶ್ರೀ ಹೆಚ್.ಜಿ. ಗೋವಿಂದೇಗೌಡ:- ಡ್ರಾಯಿಂಗ್ ಟೀಚರ್‌ಗಳನ್ನು ಅಪಾಯಿಂಟ್‌ಮೆಂಟ್ ಹಾಗೂ ಕ್ರಾಫ್ಟ್ ಟೀಚರ್ಸ್ ಅನ್ನು ಅಪಾಯಿಂಟ್‌ಮೆಂಟ್ ಮಾಡಿಕೊಳ್ಳುವುದಕ್ಕೆ ಬೇರೆ ವಿಧಾನಗಳಿವೆ, ಬೇರೆ ವ್ಯವಸ್ಥೆ ಇದೆ. ಆದರೆ ಜಾಬ್ ಓರಿಯೆಂಟೆಂಡ್ ಕೋರ್ಸ್‌ನಲ್ಲಿ ಇರತಕ್ಕಂಥವರನ್ನು ಅಲ್ಲಿ ಸೇರಿಸುತ್ತಿಲ್ಲ ಅಷ್ಟೇ.

ಶ್ರೀ ಎನ್. ಯೋಗೀಶ್ ಭಟ್:- ಸನ್ಮಾನ್ಯ ಅಧ್ಯಕ್ಷರೇ, ವಿಶೇಷವಾಗಿ ಹೊಸಹೊಸ ಶಾಲೆಗಳು ಮತ್ತು ಕಾಲೇಜುಗಳನ್ನು ಕೊಡುವ ಹಂತದಲ್ಲಿ ಅಂಗವಿಕಲರಿಗೋಸ್ಕರ ಇರುವ, ಮೆಂಟಲಿ ರಿಟಾರ್ಡೆಡ್ ಚಿಲ್ಡ್ರನ್ ಮತ್ತು ಅದೇ ರೀತಿ ಇನ್ನಿತರ ಅಂಗವಿಕಲರ ಕಲ್ಯಾಣಕ್ಕೋಸ್ಕರ ಇರುವಂಥ ಪ್ರೌಢಶಾಲೆಗಳಿಗೆ ಅನುದಾನವನ್ನು ಸರ್ಕಾರದ ಕಡೆಯಿಂದ ಕೊಡಲು ಸಾಧ್ಯವಿದೆಯೇ? ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ, ಮಂಗಳಜ್ಯೋತಿ ಎನ್ನುವ ಒಂದು ಸಮಗ್ರ ಶಾಲೆ ದಕ್ಷಿಣ ಕನ್ನಡ ಜಿಲ್ಲೆಯ ವಾಮಂಡೂರಿನಲ್ಲಿ ಅಂಗವಿಕಲರಿಗಾಗಿ ಇರುವಂಥ ಒಂದೇ ಒಂದು ಶಾಲೆ. ಅದು ಏಳು ವರ್ಷಗಳಿಂದ ಸತತವಾಗಿ ಕೆಲಸ ಮಾಡುತ್ತಿದೆ. ಆದರೆ ತಾವು ಯಾವುದೇ ನಾರಮ್ಸ್ ಅನ್ನು ಇಟ್ಟುಕೊಂಡರೂ ಅನುದಾನ ಕೊಡಲು ಸಾಧ್ಯವಾಗುತ್ತಿಲ್ಲ. ಅದನ್ನು ವಿಶೇಷ ಶಾಲೆ ಎಂದು ಪರಿಗಣಿಸಿ ಅನುದಾನ ಕೊಡಲು ಸಾಧ್ಯವಿದೆಯೇ? ರಾಜ್ಯದ ಇನ್ನಿತರ ಶಾಲೆಗಳಿಗೆ ಕೂಡ ಅಂಥಾದ್ದನ್ನು ಗೌರವಿಸಬಹುದೇ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ:- ಮಾನ್ಯ ಅಧ್ಯಕ್ಷರೇ, ಈಗಿನ ಕಾನೂನಿನ ಚೌಕಟ್ಟಿನಲ್ಲಿ ಅದಕ್ಕೆ ಅವಕಾಶವಿಲ್ಲ. ಮಾನವೀಯತೆಯ ದೃಷ್ಟಿಯಲ್ಲಿ ಸ್ನೇಹಿತರು ನನ್ನ ಹತ್ತಿರ ಹೇಳಿದ್ದಾರೆ. ಇದು ಬಹುಶಃ ಮಂಗಳೂರಿನಲ್ಲಿ ಒಂದು ಇರಬಹುದು, ಬೆಂಗಳೂರಿನಲ್ಲಿ ಒಂದು ಇರಬಹುದು, ಶಿವಮೊಗ್ಗದಲ್ಲಿ ಒಂದು ಇರಬಹುದು. ಹೀಗೆ ಹಲವಾರು ಕಡೆ ಇರಬಹುದು. ಯಾವುದಾದರೂ ಒಂದನ್ನು ನಾವು ಪರಿಶೀಲನೆ ಮಾಡಿದಾಗ ವಿಶೇಷ ಪ್ರಕರಣ ಎನ್ನುವ ಪ್ರಶ್ನೆಯೇ ಬರುವುದಿಲ್ಲ. ಕೊಟ್ಟರೆ, ಎಲ್ಲೆಲ್ಲಿ ಇದೆ ಅವರಿಗೆಲ್ಲಾ ಒದಗಿಸಬೇಕಾಗುತ್ತದೆ. ಆ ದೃಷ್ಟಿಯಿಂದ ಕೊಟ್ಟಿಲ್ಲ ಮತ್ತು ಅವಕಾಶ ಇಲ್ಲದೇ ಇರುವುದರಿಂದ ಕೊಟ್ಟಿಲ್ಲ ಎನ್ನುವುದನ್ನು ತಾವು ದಯವಿಟ್ಟು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು. ಅದು ತಾವು ಏನು ಹೇಳಿದ್ದೀರಿ ಅದರ ಬಗ್ಗೆ ಯೋಚನೆ ಮಾಡೋಣ.

ಅಲ್ಪ ಕಾಲಾವಧಿ ಪ್ರಶ್ನೆ

ವಿಷಯ:- ಪ್ರಸ್ತುತ ಆಯುಕ್ತರ ಹುದ್ದೆ ಕುರಿತು.

1 (3) **ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜ ಪೇಟೆ):-** ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪ್ರಸ್ತುತ ಸಾರಿಗೆ ಆಯುಕ್ತರ ಹುದ್ದೆಯನ್ನು ವಿಭಾಗಾಧಿಕಾರಿ ಹುದ್ದೆಯ ಮಟ್ಟಕ್ಕೆ ಏರಿಸಿರುವ ವಿಷಯ ನಿಜವಲ್ಲವೇ?